


ಶುರು ಮಾಡಿಕೊಂಡ. ಅತ್ತೇ ಅತ್ತ. ಎಲ್ಲರೂ ಅರ್ಧ ಗಂಟೆ ಸಂತೈಸಿದ ಮೇಲೆ ಸ್ವಲ್ಪ ಸಮಾಧಾನಗೊಂಡ. ಆ ಕ್ಷಣವೇ ಅಭಿ ಎದ್ದು, 'ಅಗೋ ಅಲ್ಲಿ ಮುನ್ನಿ ಬರ್ತಾ ಇದ್ದಾಳೆ' ಅಂದ.

'ನನ್ನ ಬರ್ತಡೇ ಹಾಳಾಯಿತಲ್ಲ ಅಂತ ನಾನ್ ಬೇಜಾರಾದ್ರೆ, ಇವನಿಗೆ ಬಿರಿಯಾನಿ ಚಿಂತೆ ಅಲ್ವಾ?' ಎಂದು ಅಖಿಲ್ ಬೇಸರ ಪಟ್ಟುಕೊಂಡ. ಮುನ್ನಿ ಅವರಿರುವ ಜಾಗಕ್ಕೆ ಹತ್ತಿರ ಹತ್ತಿರ ಬರುತ್ತಿದ್ದಳು.

ಅಭಿ, 'ಅಬ್ಬಾ..! ಘಮ ಘಮ ವಾಸನೆ ಬರ್ತಾ ಇದೆ. ಹೂಂ ಹು... ಹು... ಹು' ಎಂದು ಬಾಯಿ ಚಪ್ಪರಿಸಿದ.

ಅಖಿಲ್ ಮತ್ತಷ್ಟು ಹೊಟ್ಟೆ ಉರುಕೊಂಡ. ನನಗೆ ಅಭಿ ಮಾಡ್ತಾ ಇರೋದು ಸ್ವಲ್ಪ ಅತಿ ಅನುಸ್ತು.

'ಏ ಅಭಿ ಸಾಕು ಸುಮ್ಮನಿರೋ' ಎಂದು ಗದರಿದೆ. ಮುನ್ನಿ ಬಂದವಳೇ 'ಹುಟ್ಟುಹಬ್ಬದ ಶುಭಾಶಯಗಳು ಅಖಿಲ್' ಎಂದು ಕೈ ನೀಡಿದಳು. ಅವನು, ಅವಳ ಕೈಯನ್ನು